# Visit of Minister of State for External Affairs, Smt. Meenakashi Lekhi to Portugal and Spain (September 12-17, 2021)

September 11, 2021

### ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವೆಯಾದ, ಶ್ರೀಮತಿ. ಮೀನಾಕಾಶಿ ಲೇಖಿಯವರ ಪೋರ್ಚುಗಲ್ ಮತ್ತು ಸ್ಪೇನ್ ಭೇಟಿ (ಸೆಪ್ಟೆಂಬರ್ 12-17, 2021)

ಸೆಪ್ಟೆಂಬರ್ 11, 2021

ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ (ಎಂಒಎಸ್), ಶ್ರೀಮತಿ. ಮೀನಾಕಾಶಿ ಲೇಖಿಯವರು ದಿನಾಂಕ 12-17 ಸೆಪ್ಟೆಂಬರ್ 2021 ರಿಂದ ಪೋರ್ಚುಗಲ್ ಮತ್ತು ಸ್ಪೇನ್ ಗೆ ಅಧಿಕೃತ ಭೇಟಿ ನೀಡಲಿದ್ದಾರೆ.

2. ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವೆ ದಿನಾಂಕ 12-14 ಸೆಪ್ಟೆಂಬರ್ ರಿಂದ ಪೋರ್ಚುಗಲ್‌ಗೆ ಭೇಟಿ ನೀಡಿದಾಗ, ತನ್ನ ಸಹವರ್ತಿಯಾದ ಅಂತಾರಾಷ್ಟ್ರೀಯ ವ್ಯವಹಾರಗಳು ಮತ್ತು ಸಹಕಾರದ ರಾಜ್ಯ ಕಾರ್ಯದರ್ಶಿ, ಹೆಚ್.ಇ. ಶ್ರೀ ಫ್ರಾನ್ಸಿಸ್ಕೋ ಆಂಡ್ರೆ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.  ಅವರು ಪೋರ್ಚುಗಲ್‌ನ ವಿದೇಶಾಂಗ ಸಚಿವ, ಹೆಚ್.ಇ ಶ್ರೀ ಅಗಸ್ಟೊ ಸ್ಯಾಂಟೋಸ್ ಸಿಲ್ವಾ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ವಿದೇಶಾಂಗ ಸಚಿವಾಲಯದ ರಾಜ್ಯ ಕಾರ್ಯದರ್ಶಿ ಹೆಚ್.ಇ ಶ್ರೀ ಯೂರಿಕೊ ಬ್ರಿಲ್ಹಂಟೆ ಡಯಾಸ್ ಅವರನ್ನು ಭೇಟಿ ಮಾಡಲಿದ್ದಾರೆ. ಪೋರ್ಚುಗಲ್‌ನಲ್ಲಿ ಕೆಲಸ ಮಾಡಲು ಭಾರತೀಯ ಪ್ರಜೆಗಳ ನೇಮಕಾತಿ ಕುರಿತು ದ್ವಿಪಕ್ಷೀಯ ಒಪ್ಪಂದಕ್ಕೆ ಭೇಟಿಯ ಸಮಯದಲ್ಲಿ ಸಹಿ ಹಾಕಲಾಗುವುದು.

3.  ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವರು ಪೋರ್ಚುಗಲ್‌ನ ಸಂಸ್ಕೃತಿ ಸಚಿವರಾದ ಹೆಚ್.ಇ ಶ್ರೀ ಗ್ರಾಸಾ ಮರಿಯಾ ಡಾ ಫೊನ್ಸೆಕಾ ಮತ್ತು ಪೋರ್ಚುಗೀಸ್ ಭಾಷಾ ದೇಶಗಳ ಸಮುದಾಯದ ಕಾರ್ಯಕಾರಿ ಕಾರ್ಯದರ್ಶಿ (ಸಿಪಿಎಲ್‌ಪಿ) ಹೆಚ್.ಇ ಶ್ರೀ ಜಕಾರಿಯಾಸ್ ಡಾ ಕೋಸ್ಟಾ ಅವರನ್ನು ಭೇಟಿ ಮಾಡಲಿದ್ದಾರೆ. ಜುಲೈ 2021 ರಲ್ಲಿ ಭಾರತವನ್ನು ಸಿಪಿಎಲ್‌ಪಿಯ ಅಸೋಸಿಯೇಟ್ ಅಬ್ಸರ್ವರ್ ಆಗಿ ಒಪ್ಪಿಕೊಳ್ಳಲಾಯಿತು ಮತ್ತು ಲುಸೊಫೋನ್ ದೇಶಗಳೊಂದಿಗಿನ ತನ್ನ ಐತಿಹಾಸಿಕ ಸಂಬಂಧವನ್ನು ಸುಭದ್ರಗೊಳಿಸಲು ಬದ್ಧವಾಗಿದೆ. ಅವರು ಭಾರತೀಯ ಸಮುದಾಯದ ಸದಸ್ಯರನ್ನು ಭೇಟಿಯಾಗುತ್ತಾರೆ ಮತ್ತು ಆಜಾದಿ ಕಾ ಅಮೃತ್ ಮಹೋತ್ಸವ ಆಚರಣೆಯ ಭಾಗವಾಗಿ ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಗುರುತಿಸುವ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ.

4.  ರಾಜ್ಯ ಸಚಿವರು ದಿನಾಂಕ 15-17 ಸೆಪ್ಟೆಂಬರ್ ನಿಂದ ಸ್ಪೇನ್‌ಗೆ ಭೇಟಿ ನೀಡಿದಾಗ, ತಮ್ಮ ಸಹವರ್ತಿ, ವಿದೇಶಾಂಗ ವ್ಯವಹಾರಗಳ ರಾಜ್ಯ ಕಾರ್ಯದರ್ಶಿ ಹೆಚ್.ಇ ಶ್ರೀ ಏಂಜೆಲೆಸ್ ಮೊರೆನೊ ಬೌ ಅವರೊಂದಿಗೆ ಚರ್ಚಿಸುತ್ತಾರೆ ಮತ್ತು ಸ್ಪ್ಯಾನಿಷ್ ಸರ್ಕಾರದ ಇತರ ಹಿರಿಯ ಗಣ್ಯರನ್ನು ಭೇಟಿ ಮಾಡಲಿದ್ದಾರೆ. ವಲ್ಲಡೋಲಿಡ್‌ನ ಕಾಸಾ ಡಿ ಲಾ ಇಂಡಿಯಾದಲ್ಲಿ ಬೀಟಲ್ಸ್ ಮತ್ತು ಇಂಡಿಯಾ ಪ್ರದರ್ಶನವನ್ನು ರಾಜ್ಯ ಸಚಿವರು ಉದ್ಘಾಟಿಸಲಿದ್ದಾರೆ ಮತ್ತು ಸ್ಪೇನ್ ಇಂಡಿಯಾ ಕೌನ್ಸಿಲ್ ಫೌಂಡೇಶನ್‌ನಲ್ಲಿ ಭಾರತದ ಅಭಿವೃದ್ಧಿ ಸಹಕಾರದ ಕುರಿತು ಭಾಷಣ ಮಾಡಲಿದ್ದಾರೆ. ಹಾಗೂ ಅವರು ಐಸಿಸಿಆರ್ ಹಳೆಯ ವಿದ್ಯಾರ್ಥಿಗಳು ಮತ್ತು ಸ್ಪೇನ್‌ನಲ್ಲಿರುವ ಭಾರತೀಯ ಸಮುದಾಯ ಸೇರಿದಂತೆ ಇಂಡಾಲಜಿಸ್ಟ್‌ಗಳು ಮತ್ತು ಇಂಡೊಫೈಲ್‌ಗಳೊಂದಿಗೆ ಸಂವಾದ ನಡೆಸಲಿದ್ದಾರೆ.

5. ಭಾರತವು ಪೋರ್ಚುಗಲ್ ಮತ್ತು ಸ್ಪೇನ್ ಎರಡರೊಂದಿಗೂ ಆತ್ಮೀಯ ಮತ್ತು ಸ್ನೇಹಪರ ಸಂಬಂಧಗಳನ್ನು ಹೊಂದಿದೆ. ಕೋವಿಡ್ -19 ಸಾಂಕ್ರಾಮಿಕದ ನಂತರ ಎರಡೂ ದೇಶಗಳೊಂದಿಗಿನ ಮೊದಲ ಅಧಿಕೃತ ಒಪ್ಪಂದವಾದ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವರ ಭೇಟಿ ದ್ವಿಪಕ್ಷೀಯ ಸಂಬಂಧಗಳಿಗೆ ಹೊಸ ಉತ್ತೇಜನ ನೀಡುವ ನಿರೀಕ್ಷೆಯಿದೆ.

**ನವ ದೆಹಲಿ**
**ಸೆಪ್ಟೆಂಬರ್ 11, 2021**

DISCLAIMER: This is an approximate translation. The original is available in English on MEA's website and may be referred to as the official press release.